ಇ) ಲೋಕಾಯುಕ್ತ ವರದಿಯಾಧಾರದ ಮೇಲೆ ಸರ್ಕಾರ ಇದುವರೆವಿಗೂ ಎಷ್ಟು ಜನರ ವಿರುದ್ಧ ಕ್ರಮ ಕೈಗೊಂಡಿದೆ? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಲೋಕಾಯುಕ್ತರು ಕಳೆದ ಎರಡು ವರ್ಷಗಳಲ್ಲಿ ರಾಜ್ಯದ 448 ವಿವಿಧ ಇಲಾಖೆಗಳಿಗೆ ಭೇಟಿ ಕೊಟ್ಟಿದ್ದಾರೆ.

ಆ) ಕರ್ನಾಟಕ ಲೋಕಾಯುಕ್ತರು ವಿವಿಧ ಇಲಾಖೆಗಳ ಕಛೇರಿಗಳಿಗೆ ಭೇಟಿ ಕೊಟ್ಟ ಸಮಯದಲ್ಲಿ ಕಂಡು ಬಂದ ನ್ಯೂನತೆಗಳನ್ನು ಸರಿಪಡಿಸಲು ಹಾಗೂ ಇನ್ನು ಮುಂದೆ ಅಂತಹ ನ್ಯೂನತೆಗಳು ನಡೆಯದಂತೆ ನೋಡಿಕೊಳ್ಳಲು ಕಛೇರಿಯ ಮುಖ್ಯಸ್ಥರಿಗೆ ಸೂಕ್ತ ತಿಳುವಳಿಕೆ ಮತ್ತು ಎಚ್ಚರಿಕೆಗಳನ್ನು ನೀಡಿರುತ್ತಾರೆ. ಈ ಭೇಟಿಗಳ ಬಗ್ಗೆ ಲೋಕಾಯುಕ್ತರವರು ಲೋಕಾಯುಕ್ತ ಕಾಯ್ದೆಯ ಕಲಂ 12(3) ರನ್ವಯ ಯಾವುದೇ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

5356(6204) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2004–05 ಮತ್ತು 2005–06ನೇ ಸಾಲುಗಳಲ್ಲಿ ಕರ್ನಾಟಕ ಲೋಕಾಯುಕ್ತರವರು ಸರ್ಕಾರಿ ನೌಕರರ ಭ್ರಷ್ಟಾಚಾರ ಮತ್ತು ಕರ್ತವ್ಯ ನಿರ್ಲಕ್ಷ್ಯತನದ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿದ ಪ್ರಕರಣಗಳು ಎಷ್ಟು;

ಆ) ಈ ಬಗ್ಗೆ ಸರ್ಕಾರದ ಕ್ರಮಗಳೇನು;

ಇ) ಸದರಿ ಪ್ರಕರಣಗಳಲ್ಲಿನ ಆರೋಪವು ಸಾಬೀತು ಆದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಅಂಥಹವರನ್ನು ಸೇವೆಯಿಂದ ವಜಾಗೊಳಿಸಲಾಗಿದೆಯೇ;

ಉ) ಹಾಗಿಲ್ಲದಿದ್ದಲ್ಲಿ ಇಂತಹ ಪ್ರಕರಣಗಳಲ್ಲಿ ಅಂತಹವರ ಮೇಲೆ ಜರುಗಿಸಿದ ಶಿಸ್ತಿನ ಕ್ರಮಗಳೇನು;

ಊ) ಸರ್ಕಾರಿ ನೌಕರರಲ್ಲಿ ಭ್ರಷ್ಟತೆಯನ್ನು ತಡೆಗಟ್ಟುವಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ದಿನಾಂಕ 1.4.2004 ರಿಂದ 30.6.2005ರವರೆಗೆ ಒಟ್ಟು 78 ಪ್ರಕರಣಗಳಲ್ಲಿ ಕರ್ನಾಟಕ ಲೋಕಾಯುಕ್ತವು ಇಲಾಖಾ ವಿಚಾರಣೆಯನ್ನು ನಡೆಸಿ ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಿದೆ.

ಆ) ಮೇಲ್ಕಂಡ 78 ಪ್ರಕರಣಗಳ ಪೈಕಿ 50 ಪ್ರಕರಣಗಳಲ್ಲಿ ಆರೋಪವು ಸಾಬೀತಾಗಿಲ್ಲವೆಂದು ವರದಿ ನೀಡಲಾಗಿದೆ. 28 ಪ್ರಕರಣಗಳಲ್ಲಿ ಆರೋಪ ಸಾಬೀತಾಗಿದೆಯೆಂದು ವರದಿ ನೀಡಲಾಗಿದೆ. ಕ್ರಮ ತೆಗೆದುಕೊಂಡ ವಿವರಗಳು ಈ ಕೆಳಕಂಡಂತಿವೆ:

| | |
|---|---|
| ಈ) ಸೇವೆಯಿಂದ ವಜಾ ದಂಡನೆ ವಿಧಿಸಿದ ಪ್ರಕರಣಗಳು | 4 |
| ಉ) ಕಡ್ಡಾಯ ನಿವೃತ್ತಿಗೊಳಿಸಿದ ಪ್ರಕರಣಗಳು | 7 |
| ನಿವೃತ್ತಿವೇತನ ಕಡಿತಗೊಳಿಸಿದ ಪ್ರಕರಣಗಳು | 6 |
| ವೇತನ ಬಡ್ತಿ ತಡೆಹಿಡಿದ ಪ್ರಕರಣಗಳು | 4 |
| ಶಿಸ್ತು ಪ್ರಾಧಿಕಾರದಿಂದ ಆದೇಶ ಹೊರಡಿಸಬೇಕಾದ ಪ್ರಕರಣಗಳು | 7 |

ಊ) ಭ್ರಷ್ಟಾಚಾರವನ್ನು ತಡೆಗಟ್ಟಲು ತೆಗೆದುಕೊಳ್ಳಲಾದ ಕ್ರಮಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿವೆ:

1) ಕರ್ನಾಟಕ ಲೋಕಾಯುಕ್ತವನ್ನು ಸ್ಥಾಪಿಸಿ ಅದಕ್ಕೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ.

2) ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2000ನ್ನು ಜಾರಿಗೆ ತರಲಾಗಿದೆ.

3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ನ್ನು ಜಾರಿಗೆ ತರಲಾಗಿದೆ.

4) ಗಣಕೀಕರಣದ ಮೂಲಕ ಆಡಳಿತದಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ತರಲು ಕ್ರಮ ಕೈಗೊಳ್ಳಲಾಗುತ್ತಿದೆ.

5357(6205) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004–05 ಮತ್ತು 2005–06 ಸಾಲಿನಲ್ಲಿ ರಾಜ್ಯದಲ್ಲಿ ವರದಿಯಾದ ದರೋಡೆ, ಅತ್ಯಾಚಾರ, ವರದಕ್ಷಿಣೆ ಪ್ರಕರಣಗಳೂ ಎಷ್ಟು

ಆ) ದಾಖಲಾದ ಎಲ್ಲಾ ಪ್ರಕರಣಗಳ ಆರೋಪಿಗಳನ್ನು ಕಾನೂಸಿನ ಕ್ರಮಕ್ಕೆ ಒಳಪಡಿಸಲಾಗಿದೆಯೇ.

ಇ) ಆರೋಪ ಸಾಬೀತಾಗದ ಪ್ರಕರಣಗಳು ಎಷ್ಟು

ಈ) ಉತ್ತರ ಕರ್ನಾಟಕ ಭಾಗದ ಬಡ ಜನರು ಉದ್ಯೋಗಕ್ಕಾಗಿ ಬೆಂಗಳೂರಿಗೆ ಬರುತ್ತಿದ್ದು ಅವರುಗಳಿಗೆ ನಗರದ ಕೆಲವು ಕಡೆಗಳಲ್ಲಿ ತಾತ್ಕಾಲಿಕ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಟ್ಟು ಬರಗಾಲದಿಂದಾಗಿ ಬೆಂಗಳೂರಿಗೆ ಬಂದವರಿಗೆ ತಮ್ಮ ಊರಿಗೆ ವಾಪಸ್ಸು ತೆರಳುವ ತನಕ ಸುರಕ್ಷತೆಯ ವ್ಯವಸ್ಥೆಯನ್ನು ಮಾಡಿಕೊಡಲು ಸರ್ಕಾರ ಮುಂದಾಗುವುದೇ;

ಉ) ಅತ್ಯಾಚಾರ, ದರೋಡೆ, ಕೊಲೆ, ಸರಗಳ್ಳತನ ಮುಂತಾದ ಪ್ರಕರಣಗಳು ವಿಶೇಷತ ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವುದನ್ನು ನಿಯಂತ್ರಿಸಲು ಸರ್ಕಾರದ ಕ್ರಮಗಳು ಫಲಕಾರಿಯಾಗಿವೆಯೇ

ಊ) ಹಾಗಿಲ್ಲದಿದ್ದಲ್ಲಿ, ಇಲಾಖೆಯ ಕಟ್ಟುನಿಟ್ಟಿನ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ವಿವರ ಈ ಕೆಳಕಂಡಂತಿರುತ್ತದೆ.

| ವರ್ಷ | ದರೋಡೆ | | ಅತ್ಯಾಚಾರ | | ವರದಕ್ಷಿಣೆ ಪ್ರಕರಣ | |
|---|---|---|---|---|---|---|
| | ವರದಿ | ಖಿಲಾಸೆ | ವರದಿ | ಖಿಲಾಸೆ | ವರದಿ | ಖಿಲಾಸೆ |
| 2004 | 296 | 09 | 291 | 12 | 1925 | 115 |
| 2005 (31.05.05ವರೆಗೆ) | 124 | 0 | 155 | 0 | 878 | 01 |

ಆ) ಹೌದು

ಇ) ಒಟ್ಟು 137 ಪ್ರಕರಣಗಳಲ್ಲಿ ಆರೋಪ ಸಾಬೀತಾಗಿರುವುದಿಲ್ಲ.

ಈ) ಕರ್ನಾಟಕ ರಾಜ್ಯದ ನಾನಾ ಭಾಗದಿಂದ ಬಡಜನರು ಉದ್ಯೋಗಕ್ಕಾಗಿ ಬೆಂಗಳೂರಿಗೆ ಬರುತ್ತಿದ್ದು, ಅವರುಗಳಿಗೆ ಎಲ್ಲರಿಗೂ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡಲು ಹಾಗೂ ಸುರಕ್ಷತೆಯ ವ್ಯವಸ್ಥೆಯನ್ನು ಮಾಡಿಕೊಡಲು ಸರ್ಕಾರದಿಂದ ಕಷ್ಟಸಾಧ್ಯವಾಗಿರುತ್ತೆ.